(180)

158 6

**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಫ್. ಹೆಚ್. ಜಕ್ಕಪ್ಪನವರ ರವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಇಂಧನ ಸಚಿವರ ಹೇಳಿಕೆ:</u>**

ವಿಷಯ: ಕಾರ್ಯಪಾಲಕ ಇಂಜಿನಿಯರ್ (ವಿ) ಹುದ್ದೆಗೆ ಮುಂಬಡ್ತಿ ನೀಡುವಲ್ಲಿ, ಸಮಾಜ ಕಲ್ಯಾಣ ಇಲಾಖೆಯ ದಿನಾಂಕ: 14.02.2025 ರ ವರದಿಯಂತೆ ಕೆ.ಪಿ.ಟಿ.ಸಿ.ಎಲ್ ಸಂಸ್ಥೆಯಲ್ಲಿ ಪ.ಜಾತಿ-133 ಮತ್ತು ಪ.ಪಂಗಡ-27 ಸೇರಿ ಒಟ್ಟು 160 ಬ್ಯಾಕ್ ಲಾಗ್ ಮುಂಬಡ್ತಿ ಹುದ್ದೆಗಳು ಬಾಕಿ ಇರುವುದು ದೃಢಪಟ್ಟಿದೆ. 2014 ರಿಂದ ಅರ್ಹ ಅಭ್ಯರ್ಥಿಗಳು ಲಭ್ಯವಿದ್ದರೂ, ರೋಸ್ಟರ್ ಬಿಂದುಗಳನ್ನು ಪಾಲಿಸದೇ ಸಾಮಾನ್ಯ ಮುಂಬಡ್ತಿ ನೀಡಿರುವುದು ಸರ್ಕಾರದ ಆದೇಶಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಅಲ್ಲದೆ, ಡಿ.ಪಿ.ಎ.ಆರ್/126/ಎಸ್.ಸಿ.ಆರ್/82 ರನ್ವಯ 3 ವರ್ಷ ಸೇವೆ ಸಲ್ಲಿಸಿದ ಅರ್ಹ ಅಭ್ಯರ್ಥಿಗಳನ್ನು ಮುಂಬಡ್ತಿಗೆ ಪರಿಗಣಿಸುವ ನಿಯಮವನ್ನೂ ಇಲ್ಲಿ ಗಾಳಿಗೆ ತೂರಲಾಗಿದೆ. ಆದ್ದರಿಂದ, ಈ ಕೂಡಲೇ 160 ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಈ ಲೋಪಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆದಿರುವ ಬಗ್ಗೆ.

***

ಸರ್ಕಾರವು ಪದೋನ್ನತಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸಿರುವ ಎಲ್ಲಾ ಆದೇಶ/ಸುತ್ತೋಲೆಗಳ ಮೂಲಕ ನೀಡುವ ನಿರ್ದೇಶನಗಳನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಪದೋನ್ನತಿಯನ್ನು ನೀಡಲಾಗುತ್ತಿದೆ.

ಈ ಹಿಂದೆ 2005 ರಲ್ಲಿ ಸಮಾಜ ಕಲ್ಯಾಣ ಇಲಾಖೆಯು ಗುರುತಿಸಿದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಸಿ.ಆ ಮತ್ತು ಸು.ಯಿ ರವರ 1997 ಹಾಗೂ 1999 ರ ಆದೇಶಗಳಂತೆ ದಿನಾಂಕ: 24.03.2005 ರಿಂದ 16.04.2018 ರವರೆಗಿನ ಅವಧಿಯಲ್ಲಿ ನೀಡಲಾದ ಪದೋನ್ನತಿಗಳಲ್ಲಿ ಭರ್ತಿ ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಡಿಪಿಎಆರ್-21-ಎಸ್‌ಬಿಸಿ-97, ದಿನಾಂಕ:03.02.1999 ರನ್ವಯ ನಂತರ ನೀಡಿರುವ ಪದೋನ್ನತಿಗಳಲ್ಲಿ ಸಕಾನಿಇಂ(ವಿ)(ಪದವೀಧರ) ವೃಂದದಲ್ಲಿ ಕಾರ್ಯನಿರತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಧಿಕಾರಿಗಳ ಸಂಖ್ಯೆ ಶೇ.15 ಹಾಗೂ ಶೇ.3 ಅನ್ನು ಮೀರಿದ್ದರಿಂದ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಸೃಷ್ಟಿಯಾಗಿರುವುದಿಲ್ಲ.

ಶ್ರೀ.ಶಿವಕುಮಾರ್ ಮತ್ತು ಇತರರು, ಕವಿಪ್ರನಿನಿ ಯಲ್ಲಿ 2013 ರಿಂದ ಸಹಾಯಕ ಇಂಜಿನಿಯರ್(ವಿ) (ಪದವೀಧರ) ಹುದ್ದೆಯಿಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) (ಪದವೀಧರ) ಬ್ಯಾಕ್‌ಲಾಗ್ ಹುದ್ದೆಗೆ ಪದೋನ್ನತಿಯನ್ನು ನೀಡಿರುವುದಿಲ್ಲವೆಂದು ಸಮಾಜ ಕಲ್ಯಾಣ ಇಲಾಖೆಗೆ ಮನವಿ ಸಲ್ಲಿಸಿರುತ್ತಾರೆ. ಈ ಸಂಬಂಧ ಸಮಾಜ ಕಲ್ಯಾಣ ಇಲಾಖೆಗೆ ನಿಗಮದ ದಿನಾಂಕ: 15.10.2024 ಹಾಗೂ 19.11.2024 ರ ಪತ್ರದಲ್ಲಿ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ನೀಡಲಾಗಿರುತ್ತದೆ.

ಸದರಿ ಮಾಹಿತಿಯನ್ನು ಪರಿಶೀಲಿಸಿ, ಆಯುಕ್ತರು, ಸಮಾಜ ಕಲ್ಯಾಣ ಇಲಾಖೆಯ ದಿನಾಂಕ:14.02.2025 ರ ವರದಿಯಲ್ಲಿ 2004 ರಿಂದ ನೀಡಲಾದ ಪದೋನ್ನತಿಗಳಿಗೆ ಸಂಬಂಧಪಟ್ಟಂತೆ, ಪ.ಜಾ-133 ಮತ್ತು ಪ.ಪಂ-27 ಬ್ಯಾಕ್‌ಲಾಗ್ ಹುದ್ದೆಗಳನ್ನು ಗುರುತಿಸಲಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ.

ಈ ಮಧ್ಯೆ, ಸರ್ಕಾರವು ಪದೋನ್ನತಿಗೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸಿರುವ ಎಲ್ಲಾ ನಿರ್ದೇಶನಗಳನ್ನು ನಿಗಮದಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಅದರಂತೆ ಪದೋನ್ನತಿಯನ್ನು ನೀಡುತ್ತಿರುವುದರಿಂದ ಮೇಲಿನ ಸಮಾಜ ಕಲ್ಯಾಣ ಇಲಾಖೆಯ ವರದಿಯಂತೆ ಯಾವುದೇ ಬ್ಯಾಕ್‌ಲಾಗ್ ಹುದ್ದೆಗಳು ಲಭ್ಯವಿರುವುದಿಲ್ಲ. ಆದುದರಿಂದ, ವರದಿಯ ವಿಷಯವಾಗಿ ಸಮಾಜ ಕಲ್ಯಾಣ ಇಲಾಖೆ ರವರೊಂದಿಗೆ ಸಭೆ ನಡೆಸಿ, ಸಭೆಯ ನಿರ್ಣಯದಂತೆ ಪ.ಜಾ/ಪ.ಪಂ ನೌಕರರ ಪ್ರಾತಿನಿಧ್ಯತೆಯ ಬಗ್ಗೆ ಹಾಗೂ ರೋಸ್ಟರ್ ನಿರ್ವಹಣೆಯ ಕುರಿತು ಕವಿಪ್ರನಿನಿಯ ದಿನಾಂಕ:10.02.2025 ರ ಪತ್ರದಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಸ್ಪಷ್ಟೀಕರಣವನ್ನು ಕೋರಲಾಗಿರುತ್ತದೆ.

ಈ ಕುರಿತಂತೆ ಕರ್ನಾಟಕ ವಿಧಾನಮಂಡಲದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ ಸಭೆಗಳಲ್ಲಿ ಚರ್ಚಿಸಲಾಗಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯು ಜಂಟಿಯಾಗಿ ಸ್ಪಷ್ಟೀಕರಣವನ್ನು ನೀಡಲು ಸೂಚಿಸಿದ್ದು, ಸ್ಪಷ್ಟೀಕರಣವನ್ನು ನಿರೀಕ್ಷಿಸಲಾಗಿದೆ. ಸದರಿ ಸ್ಪಷ್ಟೀಕರಣ ಸ್ವೀಕೃತಗೊಂಡ ನಂತರದಲ್ಲಿ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲಾಗುವುದು. (ಮೇಲೆ ತಿಳಿಸಿರುವ ಪತ್ರಗಳ ಪ್ರತಿಯನ್ನು ಲಗತ್ತಿಸಲಾಗಿದೆ)

ಸಂಖ್ಯೆ: ಎನರ್ಜಿ 112 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು